# ಕರ್ನಾಟಕ ಲೋಕಸೇವಾ ಆಯೋಗ, "ಉದ್ಯೋಗ ಸೌಧ", ಬೆಂಗಳೂರು–01.

ಸಂಖ್ಯೆ: ಇ(3)374/2018–19/ಪಿಎಸ್‌ಸಿ ದಿನಾಂಕ: 05–03–2019.

## ಅಧಿಸೂಚನೆ

1. ಕರ್ನಾಟಕ ಸರ್ಕಾರದ ನಿರ್ದೇಶನಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿರುವ ಮಾಜಿ ಸೈನಿಕರಿಗಾಗಿ ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಿಕರು, ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಕರ್ನಾಟಕ ನಾಗರೀಕ ಸೇವೆಗಳ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರ ಮತ್ತು ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 90 ಎಸ್‌ಸಿಆರ್ 85, ದಿನಾಂಕ: 27–02–1992 ಮತ್ತು ಅಧಿಸೂಚನೆ ಸಂಖ್ಯೆ: ಸಿಆಸುಇ 18 ಸೇವನೆ 2013, ದಿನಾಂಕ: 13–12–2013 ಹಾಗೂ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 147 ಎಸ್‌ಸಿಆರ್ 2014, ದಿನಾಂಕ: 23–05–2015ರ ನಿಯಮಗಳಡಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು **ON-LINE** ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

## ಹುದ್ದೆಗಳ ವಿವರಗಳು

| ಕ್ರ. ಸಂ. | ಹುದ್ದೆಗಳ ಹೆಸರು | ಉಳಿಕೆ ಮೂಲ ವೃಂದದ ಹುದ್ದೆಗಳು |
|---|---|---|
| 1. | ದ್ವಿತೀಯ ದರ್ಜೆ ಸಹಾಯಕರು | 13 |
| 2. | ಕಲ್ಯಾಣ ಸಂಘಟಿಕರು | 08 |
| 3. | ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು | 06 |
| | ಒಟ್ಟು | 27 |

2. ಈ ಮೇಲೆ ಹೇಳಲಾದ ಕ್ರಮ ಸಂಖ್ಯೆ: 1, 2 ಮತ್ತು 3ರ ಹುದ್ದೆಗಳಾದ ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಿಕರು ಮತ್ತು ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ಬಗ್ಗೆ:–

- ವಿಶೇಷ ಸೂಚನೆ:–

(1) ಪರೀಕ್ಷಾ ದಿನಾಂಕವನ್ನು ಆಯೋಗವು ನಿಗದಿಪಡಿಸಿದ ನಂತರ, ಪರೀಕ್ಷಾ ವೇಳಾಪಟ್ಟಿಯನ್ನು ಆಯೋಗದ ಅಂತರ್ಜಾಲ **http://kpsc.kar.nic.in/timetable** ನಲ್ಲಿ ನೋಡಬಹುದು.
ಅಭ್ಯರ್ಥಿಗಳಿಗೆ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಆಯೋಗದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ದಿನ ಪತ್ರಿಕೆಗಳಲ್ಲಿ ಪ್ರಕಟಣೆಯ ಮೂಲಕ ತಿಳಿಸಲಾಗುವುದು ಹಾಗೂ ಈ ಬಗ್ಗೆ ಮಾಹಿತಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿಯೂ ಬಿತ್ತರಿಸಲಾಗುವುದು. ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಒಂದು ಮೂಲ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ (ಪ್ಯಾನ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ಆಧಾರ್ ಕಾರ್ಡ್/ ಪಾಸ್ಪೋರ್ಟ್/ವೋಟರ್ ಐಡಿ/ಸರ್ಕಾರಿ ನೌಕರರ ಐಡಿ) ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಬೇಕು. ತಪ್ಪಿದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

(2) ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅಧಿಸೂಚನೆಯ ಅನುಬಂಧ – 6 ರಲ್ಲಿನ ನಮೂನೆಗಳಲ್ಲಿ ಪಡೆದಿಟ್ಟುಕೊಂಡಿರತಕ್ಕದ್ದು.

(3) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಅನುಬಂಧ– 3 ಮತ್ತು 4 ರಲ್ಲಿನ ಪರೀಕ್ಷಾ ಅವಧಿ ಮತ್ತು ಪಠ್ಯಕ್ರಮ ಹಾಗೂ ವಿಧಾನದನ್ವಯ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುತ್ತದೆ; ಮತ್ತು ಅನುಬಂಧ– 5 ರಲ್ಲಿನ ಪಠ್ಯಕ್ರಮದನ್ವಯ ಹಾಗೂ ಅಧಿಸೂಚನೆಯ ಕಂಡಿಕೆ – 9.2 ರಲ್ಲಿ ವಿವರಿಸಲಾಗಿರುವಂತೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲಾಗುತ್ತದೆ ಹಾಗೂ ಅದನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗುತ್ತದೆ.

3. ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರಿಗಳು ದೃಢೀಕರಿಸಿ ನೀಡಿರುವಂತೆ ವರ್ಗೀಕರಣದನ್ವಯ ಅನುಬಂಧ– 2 ರಲ್ಲಿ ತೋರಿಸಿದೆ. ಅನುಬಂಧದಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಪರೀಕ್ಷಾ ದಿನಾಂಕದ ಅವಧಿಯೊಳಗೆ ಸ್ವೀಕೃತವಾಗುವ ಹುದ್ದೆಗಳನ್ನು ಆಯೋಗದ ಆದೇಶದನ್ವಯ ತಿದ್ದುಪಡಿ/ಸೇರ್ಪಡೆ ಅಧಿಸೂಚನೆಯ ಮೂಲಕ ಅಧಿಸೂಚಿಸಲಾಗುವುದು.

1. ಅರ್ಜಿ ಸಲ್ಲಿಸಲು ನಿಗದಿಪಡಿಸುವ ಪ್ರಾರಂಭಿಕ ದಿನಾಂಕ:06.03.2019
2. ಅರ್ಜಿ ಸಲ್ಲಿಸಲು ನಿಗದಿಪಡಿಸುವ ಕೊನೆಯ ದಿನಾಂಕ: 05.04.2019(ರಾತ್ರಿ: 11.59 ಗಂಟೆಯೊಳಗೆ)
3. ಶುಲ್ಕ ಪಾವತಿಸಲು ಕೊನೆಯ ದಿನಾಂಕ: 08.04.2019

**downloaded from: www.kpscvaani.com**

4. ಸ್ಪರ್ಧಾತ್ಮಕ ಪರೀಕ್ಷಾ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

3.1 ಅಭ್ಯರ್ಥಿಗಳು Online ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಅನುಬಂಧ–1 ರಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿ ತಿಳಿದುಕೊಳ್ಳತಕ್ಕದ್ದು. **Online** ಮೂಲಕ ಅರ್ಜಿ ಸಲ್ಲಿಸಲು ಆಧಾರ್ ಕಾರ್ಡ್ **(Aadhar card)** ಸಂಖ್ಯೆಯನ್ನು ತಪ್ಪದೇ ನಮೂದಿಸಲು ಸೂಚಿಸಿದೆ. ಅರ್ಜಿಯಲ್ಲಿ ನಮೂದಿಸುವ ಇ–ಮೇಲ್ email ವಿಳಾಸ/ಮೊಬೈಲ್ ಸಂಖ್ಯೆ ವಿಶಿಷ್ಟವಾಗಿರಬೇಕು (**Unique**). ನೇಮಕಾತಿ ಪ್ರಕ್ರಿಯೆ ಮುಗಿಯುವವರೆವಿಗೂ ಇದೇ ಇ–ಮೇಲ್ (email) ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನೇ ಪರಿಗಣಿಸಲಾಗುವುದು ಹಾಗೂ ಇದನ್ನು ಬದಲಾಯಿಸಲು ಅವಕಾಶ ನೀಡಲಾಗುವುದಿಲ್ಲ.

ವಿಶೇಷ ಸೂಚನೆ: **On-line**ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ **(Help line) No.** 8660324265, 7349436450 ಅನ್ನು ಸಂಪರ್ಕಿಸಬಹುದು.

3.2. ಆಯೋಗವು ಮೇಲ್ಕಂಡ ಹುದ್ದೆಗಳಿಗೆ ಪರೀಕ್ಷಾ ದಿನಾಂಕವನ್ನು ತದನಂತರ ನಿಗದಿಪಡಿಸಿ, ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲದಲ್ಲಿ ಹಾಗೂ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

3.3. ಅರ್ಜಿಗಳನ್ನು ಆನ್–ಲೈನ್ (online) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

4. ಪರೀಕ್ಷಾ ಶುಲ್ಕ:–

ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಿಕರು ಮತ್ತು ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಈ ಹುದ್ದೆಗಳಿಗೆ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಮಾತ್ರ ಅರ್ಜಿಗಳನ್ನು ಆಹ್ವಾನಿಸಿರುವುದರಿಂದ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| | |
|---|---|
| ಸಾಮಾನ್ಯ ಅರ್ಹತೆ, 2(ಎ),2(ಬಿ),3(ಎ),3(ಬಿ)ಗೆ ಸೇರಿದ ಮಾಜಿ ಸೈನಿಕ ಅಭ್ಯರ್ಥಿಗಳಿಗೆ | ರೂ. 50/– |
| ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ,ಪ್ರವರ್ಗ–1ಗೆ ಸೇರಿದ ಮಾಜಿ ಸೈನಿಕ ಅಭ್ಯರ್ಥಿಗಳಿಗೆ | ವಿನಾಯಿತಿ |

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1ಗೆ ಸೇರಿದ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದೆ. ಆದರೆ ಅಪ್ಲೀಕೇಷನ್ ಪ್ರೋಸೆಸಿಂಗ್ ಶುಲ್ಕವನ್ನು ಪಾವತಿಸ ಬೇಕು.

4.1 ಶುಲ್ಕ ಪಾವತಿಸುವ ಬಗ್ಗೆ:–

ಪರೀಕ್ಷೆಯ ಅರ್ಜಿಗಳನ್ನು **online** ಮೂಲಕ ಭರ್ತಿ ಮಾಡಿ, ಪರೀಕ್ಷಾ ಶುಲ್ಕವನ್ನು ಯಾವುದೇ ನಾಗರೀಕ ಸೇವಾ ಕೇಂದ್ರಗಳಲ್ಲಿ (**CSC**) ನೇರವಾಗಿ ಅಥವಾ **Net Banking/ Debit card/ Credit card** ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಈ ಸೌಲಭ್ಯಗಳನ್ನು ಹೊರತುಪಡಿಸಿ, ಇತರೆ ಯಾವುದೇ ರೀತಿಯಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಆಯೋಗದ ಇತರೆ ಪರೀಕ್ಷೆ ನೇಮಕಾತಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕ ಪಾವತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಶುಲ್ಕವನ್ನು ನಾಗರೀಕ ಸೇವಾ ಕೇಂದ್ರಗಳಲ್ಲಿ (CSC) ಪಾವತಿಸಲು ಅವಕಾಶ ನೀಡಲಾಗಿರುವುದರಿಂದ ಅರ್ಜಿಗಳನ್ನು ಇಲ್ಲಿಯೂ ಸಹ ಸಲ್ಲಿಸಬಹುದಾಗಿದೆ.

1) ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡದೇ ಅರ್ಜಿ ಭರ್ತಿ ಮಾಡಲು **online** ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.
2) ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಅರ್ಜಿಯನ್ನು ತಿರಸ್ಕರಿಸಲಾಗುವುದು.

5. ಅರ್ಹತಾ ಷರತ್ತುಗಳು:–

- ಎಲ್ಲಾ ವರ್ಗಗಳ ಮಾಜಿ ಸೈನಿಕ ಅಭ್ಯರ್ಥಿಗಳು ಮಾತ್ರ 'ಆನ್‌ಲೈನ್' ಮೂಲಕ ಅರ್ಜಿ ಸಲ್ಲಿಸುವುದು.
- ಭಾರತೀಯ ನಾಗರೀಕನಾಗಿರತಕ್ಕದ್ದು ಹಾಗೂ ಆಧಾರ್ ಸಂಖ್ಯೆಯನ್ನು ಹೊಂದಿರಬೇಕು.
- ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.
- ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.


downloaded from: www.kpscvaani.com

- ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ
- ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕ ಸೇವಾ ಆಯೋಗದಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.
- ಯಾವುದೇ ನೈತಿಕ ಪರಿಭಾಷೆಗೆ ಶಿಕ್ಷೆಗೆ ಒಳಪಟ್ಟ ವ್ಯಕ್ತಿ ಅಥವಾ ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕ ಸೇವಾ ಆಯೋಗದಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ತಾತ್ಕಾಲಿಕವಾಗಿ ಡಿಬಾರ್ ಆದ ಅಥವಾ ಅನರ್ಹಗೊಂಡ ವ್ಯಕ್ತಿಯು, ಸರ್ಕಾರವು ಎಲ್ಲಾ ಸಂದರ್ಭಗಳನ್ನು ಮರುಪರಿಶೀಲಿಸಿ ಅವರು ನೇಮಕಾತಿಗೆ ಅರ್ಹರೆಂದು ಪರಿಗಣಿಸುವವರೆಗೂ, ನೇಮಕಾತಿಗೆ ಅರ್ಹರಾಗುವುದಿಲ್ಲ.

## 6. ಶೈಕ್ಷಣಿಕ ವಿದ್ಯಾರ್ಹತೆ:–

ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಿಕರು ಮತ್ತು ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 81 ಸೇವನೆ 2017, ದಿನಾಂಕ: 27.02.2018 ರ ವಿದ್ಯಾರ್ಹತೆ

1. ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸುವ ಪಿ.ಯು.ಸಿ ವಿದ್ಯಾರ್ಹತೆ

ತತ್ಸಮಾನ ವಿದ್ಯಾರ್ಹತೆಗಳು

2. ಸಿ.ಬಿ.ಎಸ್.ಇ. ಮತ್ತು ಐ.ಎಸ್.ಸಿ. ಮಂಡಳಿಯು ನಡೆಸುವ ಕ್ಲಾಸ್ 12 ಪರೀಕ್ಷೆ.
3. ಇತರೆ ರಾಜ್ಯ ಸರ್ಕಾರದ ಪರೀಕ್ಷಾ ಮಂಡಳಿಗಳಿಂದ ನಡೆಸುವ ಕ್ಲಾಸ್ 12 ಪರೀಕ್ಷೆ.
3. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (ಎನ್.ಐ.ಓ.ಎಸ್.) ವತಿಯಿಂದ ನಡೆಸುವ ಉನ್ನತ ಪ್ರೌಢ ಶಿಕ್ಷಣ ಕೋರ್ಸ್/ ಹೆಚ್.ಎಸ್.ಸಿ..
4. ಮೂರು ವರ್ಷಗಳ ಡಿಪ್ಲೊಮಾ ಅಥವಾ ಎರಡು ವರ್ಷಗಳ ಐ.ಟಿ.ಐ. ಕೋರ್ಸ್ ಅಥವಾ ಎರಡು ವರ್ಷಗಳ ವೃತ್ತಿ ಶಿಕ್ಷಣ ಡಿಪ್ಲೊಮಾ (ಜೆ.ಓ.ಸಿ/ ಜೆ.ಓ.ಡಿ.ಸಿ/ ಜೆ.ಎಲ್.ಡಿ.ಸಿ) ಅಭ್ಯರ್ಥಿಗಳು ಎನ್.ಐ.ಓ.ಎಸ್. ನ ವತಿಯಿಂದ ನಡೆಸುವ ಒಂದು ಭಾಷಾ ಕೋರ್ಸ್ ಮತ್ತು ಒಂದು ಶೈಕ್ಷಣಿಕ ವಿಷಯದಲ್ಲಿ (ದೂರಕಲಿಕೆ ಮಾದರಿಯಲ್ಲಿ) ಅಥವಾ ಪದವಿಪೂರ್ವ ಮಂಡಳಿಯು ನಡೆಸುವ ಪರೀಕ್ಷೆಯಲ್ಲಿ ಒಂದು ಭಾಷೆ ಮತ್ತು ಒಂದು ವಿಷಯದಲ್ಲಿ ಉತ್ತೀರ್ಣರಾದಲ್ಲಿ ಮಾತ್ರ ಪಿ.ಯು.ಸಿ.ಗೆ ತತ್ಸಮಾನವೆಂದು ಪರಿಗಣಿಸಬಹುದು.
5. ಕಲ್ಯಾಣ ಸಂಘಟಿಕರು/ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಮೇಲೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಜೊತೆಗೆ "ಭಾರತೀಯ ಸಶಸ್ತ್ರ ಪಡೆಗಳಲ್ಲಿ ಜ್ಯೂನಿಯರ್ ಕಮಿಷನ್ಡ್ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವುದು ಕಡ್ಡಾಯವಾಗಿರುತ್ತದೆ."
   ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸೈಕಪುಇ/ಸಿಬ್ಬಂದಿ/ನೇನೇಸಿ/134/2018, ದಿನಾಂಕ: 05.06.2018 ರಂತೆ ಜ್ಯೂನಿಯರ್ ಕಮಿಷನ್ಡ್ ಆಫೀಸರ್ಸ್ ಹುದ್ದೆಗಳಿಗೆ ಮೀಸಲಾಗಿರುವ ಹುದ್ದೆಗಳಾದ ಕಲ್ಯಾಣ ಸಂಘಟಿಕರು/ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಸಶಸ್ತ್ರ ಪಡೆಗಳಾದ ಭೂಸೇನೆ, ವಾಯುಸೇನೆ ಮತ್ತು ನೌಕಾ ಸೇನೆಗಳಲ್ಲಿ ತತ್ಸಮಾನವಾದ ರ್‍ಯಾಂಕ್‌ಗಳ ಪಟ್ಟಿಯನ್ನು ಈ ಕೆಳಕಂಡಂತೆ ಓದಲಾಗಿದೆ.

| Indian Army | Indian Air Force | Indian Navy |
|---|---|---|
| Subedar Major | Master Warrant Officer | Master Chief Petty Officer (I Class) |
| Subedar | Warrant Officer | Master Chief Petty Officer (II Class) |
| Naib Subedar | Junior Warrant Officer | Chief Petty Officer |

ವಿಶೇಷ ಸೂಚನೆ: ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ಶೈಕ್ಷಣಿಕ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

## 7. ಹುದ್ದೆಗಳ ವರ್ಗೀಕರಣ:–

ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಿಕರು ಮತ್ತು ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ವರ್ಗೀಕರಣದ ವಿವರವನ್ನು ಅನುಬಂಧ– 2 ರಲ್ಲಿ ತೋರಿಸಿದೆ.

ಅನುಬಂಧದಲ್ಲಿ ತೋರಿಸಿರುವ ಸದರಿ ನೇಮಕಾತಿ ಪ್ರಾಧಿಕಾರದಲ್ಲಿ ಖಾಲಿಯಿರುವ ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಿಕರು ಮತ್ತು ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಬದಲಾವಣೆಗೆ ಒಳಪಟ್ಟಿರುತ್ತದೆ, ಪರೀಕ್ಷಾ ದಿನಾಂಕದ ಅವಧಿಯೊಳಗೆ ಸ್ವೀಕೃತವಾಗುವ ಹುದ್ದೆಗಳನ್ನು ಆಯೋಗದ ಆದೇಶದನ್ವಯ ತಿದ್ದುಪಡಿ/ ಸೇರ್ಪಡೆ ಅಧಿಸೂಚನೆ ಮೂಲಕ ಅಧಿಸೂಚಿಸಲಾಗುವುದು.

downloaded from: www.kpscvaani.com

8. <u>ವೇತನ ಶ್ರೇಣಿ :–</u>

(ಅ) <u>ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಕರು ಮತ್ತು ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ (ಪರಿಷ್ಕೃತ ವೇತನ):</u>

ರೂ. **21400–500–22400–550–24600–600–27000–650–29600–750–32600–850–36000–950–39800–1100–42000/–**

<u>ಪಿಂಚಣಿ ಸೌಲಭ್ಯ:</u> ಸಿವಿಲ್ ಸೇವೆಯಡಿಯ ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಕರು, ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31.03.2006ರಂತೆ (ಪಿಂಚಣಿ ಅಂಶದಾಯಿ ಯೋಜನೆಯನ್ವಯ)

9. <u>ವಯೋಮಿತಿ:–</u>

ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು

ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು

ಗರಿಷ್ಠ ವಯೋಮಿತಿ:

| | |
|---|---|
| ಸಾಮಾನ್ಯ ಅರ್ಹತೆ ಅಭ್ಯರ್ಥಿಗಳಿಗೆ | 35 ವರ್ಷಗಳು |
| ಪ್ರವರ್ಗ 2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ | 38 ವರ್ಷಗಳು |
| ಪ.ಜಾ/ಪ.ಪಂ/ಪ್ರ–1 ಅಭ್ಯರ್ಥಿಗಳಿಗೆ | 40 ವರ್ಷಗಳು |

ಅಭ್ಯರ್ಥಿಗಳ ಜನ್ಮ ದಿನಾಂಕವನ್ನು **SSLC** ಅಂಕಪಟ್ಟಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ **(TC), Cumulative Record/ Birth Certificate issued by the competent authority** ಉದ್ಧೃತ ಭಾಗವನ್ನು ಪರಿಗಣಿಸಲಾಗುವುದು.

<u>ವಯಸ್ಸಿನ ಸಡಿಲಿಕೆ (ದ್ವಿತೀಯ ದರ್ಜೆ ಸಹಾಯಕರು/ ಕಲ್ಯಾಣ ಸಂಘಟಕರು/ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಸಂಬಂಧಿಸಿದಂತೆ ಮಾಜಿ ಸೈನಿಕರಿಗೆ ಮಾತ್ರ):–</u>

ಸಿಆಸುಇ ಸುತ್ತೋಲೆ ಸಂಖ್ಯೆ ಸಿಆಸುಇ 163 ಸೆನೆನಿ 2006 ದಿನಾಂಕ: 26.06.2007ರಲ್ಲಿ ತಿಳಿಸಿರುವಂತೆ, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6(3)(ಸಿ)ರ ಪ್ರಕಾರ:–

**(c) in the case of candidate who is an ex-serviceman, by three years plus the number of years of service rendered by him in the Armd Forces of the Union.**

ವಿವರಣೆ: (ಎ) ಮಾಜಿ ಸೈನಿಕ ಎಂದರೆ ಸಶಸ್ತ್ರದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧರಲ್ಲದ ಹುದ್ದೆಗಳಲ್ಲಿ) ಸೇವೆ ಸಲ್ಲಿಸಿದ ವ್ಯಕ್ತಿ.ಆದರೆ ಡಿಫೆನ್ಸ್ ಸೆಕ್ಯುರಿಟಿಕೋರ್, ಜನರಲ್ ರಿಸರ್ವ್ ಇಂಜಿನೀಯರಿಂಗ್ ಫೋರ್ಸ್, ಲೋಕಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ: ಮತ್ತು (ಬಿ) ಕೇಂದ್ರ ಸಶಸ್ತ್ರದಳಗಳಲ್ಲಿ ಸೇವೆ ಸಲ್ಲಿಸುವಾಗ ಹತರಾದ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

(ಅ) ಮೇಲ್ಕಂಡ ದಳದ ಸೇನೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಲ್ಲಿ ಬಿಡುಗಡೆಯಾದವನು

ಅಥವಾ

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇನೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು.

**downloaded from: www.kpscvaani.com**

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು.
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

ಈ ಮೇಲ್ಕಂಡ ವರ್ಗದ ಅಭ್ಯರ್ಥಿಗಳು ಮಾಜಿ ಸೈನಿಕ ಮೀಸಲಾತಿಗೆ ಅರ್ಹರಿರುತ್ತಾರೆ.

ವಿವರಣೆ: ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ.ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವ ವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

1. ದಿನಾಂಕ:05.04.2019ರ ಒಳಗೆ ಅಭ್ಯರ್ಥಿಯು ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು ಹಾಗೂ ನಿಗದಿತ ವಯೋಮಿತಿಯಲ್ಲಿರತಕ್ಕದ್ದು.
2. ವಿವಿಧ ಮೀಸಲಾತಿ ಕೋರಿ ಹಾಜರು ಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ; ಆ ಮೀಸಲಾತಿಯನ್ನು ರದ್ದುಪಡಿಸಿ, ಸಾಮಾನ್ಯ ಅರ್ಹತೆಯಲ್ಲಿ ಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ, ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಪರಿಣಿಸಲಾಗುವುದು, ಇಲ್ಲವಾದಲ್ಲಿ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

**10.** <u>ಸೇವಾನಿರತ ಅಭ್ಯರ್ಥಿ:–</u>

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 5(4) ರನ್ವಯ "ಯಾರೇ ಅರ್ಜಿದಾರರು ತಾನು ಅರ್ಜಿ ಸಲ್ಲಿಸುವ ಸಮಯದಲ್ಲಿ ಸರ್ಕಾರದ ಯಾವುದೇ ಇತರೆ ಇಲಾಖೆಯಲ್ಲಿ ಅಥವಾ ಯಾವುದೇ ಇತರೆ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಅಥವಾ ಈ ಸಂಬಂಧವಾಗಿ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ಪ್ರಾಧಿಕಾರದಲ್ಲಿ ಖಾಯಂ ಅಥವಾ ತಾತ್ಕಾಲಿಕ ನೌಕರಿಯಲ್ಲಿದ್ದರೆ ಮತ್ತು ಆತನು ಯಾರ ಅಧೀನದಲ್ಲಿ ಉದ್ಯೋಗದಲ್ಲಿರುವನೋ ಆ ಇಲಾಖಾ ಮುಖ್ಯಸ್ಥರಿಂದ ಅಥವಾ ಸಂದರ್ಭಾನುಸಾರ ಸರ್ಕಾರದಿಂದ ಅಥವಾ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯದೆಯೇ ಅರ್ಜಿಯನ್ನು ಸಲ್ಲಿಸಿದ್ದರೆ ಆತನು ಸರ್ಕಾರದ ಯಾವುದೇ ಇಲಾಖೆಯಲ್ಲಿನ ಹುದ್ದೆಯ ನೇಮಕಕ್ಕೆ ಅರ್ಹನಾಗಿರತಕ್ಕದ್ದಲ್ಲ".

ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮುನ್ನ ಅನುಮತಿಯನ್ನು ಅಂದರೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (NOC) ಕಡ್ಡಾಯವಾಗಿ ಅವರುಗಳ ನೇಮಕಾತಿ ಪ್ರಾಧಿಕಾರಿಗಳ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಈ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಅಪ್ಲೋಡ್ ಮಾಡಬೇಕು, ತಪ್ಪಿದ್ದಲ್ಲಿ ಇವರ ಅಭ್ಯರ್ಥಿತ್ವವನ್ನು ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಈ ನಿರಾಕ್ಷೇಪಣಾ ಪ್ರಮಾಣ ಪತ್ರದ (NOC) ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (NOC) ಹಾಜರುಪಡಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವನ್ನು ರದ್ದುಗೊಳಿಸಲಾಗುವುದು. ಈ ಪ್ರಮಾಣ ಪತ್ರದ ನಮೂನೆಯನ್ನು ಅನುಬಂಧ–6 ರಲ್ಲಿ ತೋರಿಸಲಾಗಿದೆ.

ಸೈನಿಕರ ಸೇವಾ ಒಪ್ಪಂದದ ಮುಕ್ತಾಯಕ್ಕೆ ಮುನ್ನ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅವರ ಮೇಲಾಧಿಕಾರಿಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು ಅದರ ದಿನಾಂಕವನ್ನು ಅರ್ಜಿಯಲ್ಲಿ ನಮೂದಿಸಿ ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು ಹಾಗೂ ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಇದೇ ನಿರಾಕ್ಷೇಪಣಾ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.

**11..** <u>ಸ್ಪರ್ಧಾತ್ಮಕ ಪರೀಕ್ಷೆ:–</u>

ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರ ಮತ್ತು ತಿದ್ದುಪಡಿ ಅಧಿಸೂಚನೆಗಳನ್ವಯ ನಡೆಸುವ ಈ ಪರೀಕ್ಷೆಗಳು ವಿವರಣಾತ್ಮಕ ಮತ್ತು ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪತ್ರಿಕೆಗಳನ್ನು ಹೊಂದಿರುತ್ತದೆ.

downloaded from: www.kpscvaani.com

**11.1 ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯಕ್ರಮ:**

ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯು ಕೆಳಕಂಡ 3 ಪತ್ರಿಕೆಗಳನ್ನು ಹೊಂದಿರುತ್ತದೆ.

| ಪತ್ರಿಕೆ | ವಿಷಯ | ಅಂಕಗಳು | ಪರೀಕ್ಷಾ ಅವಧಿ | ಪರೀಕ್ಷಾ ವಿಧಾನ |
|---|---|---|---|---|
| **ಪತ್ರಿಕೆ 1** | ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ | **150** ಅಂಕಗಳು | **1½** ಗಂಟೆಗಳ ಅವಧಿ | ವಿವರಣಾತ್ಮಕ ಪತ್ರಿಕೆ/ **Descriptive Type** |
| **ಪತ್ರಿಕೆ 2** | ಸಾಮಾನ್ಯ ಕನ್ನಡ/ ಸಾಮಾನ್ಯ ಇಂಗ್ಲೀಷ್ | **100** ಅಂಕಗಳು | **1½** ಗಂಟೆಗಳ ಅವಧಿ | ವಸ್ತುನಿಷ್ಠ ಬಹು ಆಯ್ಕೆ ಪತ್ರಿಕೆ/ **Objective Multiple Choice Type** |
| **ಪತ್ರಿಕೆ 3** | ಸಾಮಾನ್ಯ ಜ್ಞಾನ | **100** ಅಂಕಗಳು | **1½** ಗಂಟೆಗಳ ಅವಧಿ | ವಸ್ತುನಿಷ್ಠ ಬಹು ಆಯ್ಕೆ ಪತ್ರಿಕೆ/ **Objective Multiple Choice Type** |

ಈ ಮೇಲಿನ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯಕ್ರಮವನ್ನು **ಅನುಬಂಧ–03, 04 ಮತ್ತು 05**ರಲ್ಲಿ ತೋರಿಸಲಾಗಿದೆ.

**11.2.** ಕಡ್ಡಾಯ ಕನ್ನಡ ಪರೀಕ್ಷೆ: (ಪಠ್ಯಕ್ರಮವನ್ನು ಅನುಬಂಧ–05ರಲ್ಲಿ ನೋಡತಕ್ಕದ್ದು) ಮೇಲ್ಕಂಡ ಹುದ್ದೆಗಳ ಆಯ್ಕೆಗೆ ಅರ್ಹರಾಗಲು ಅಭ್ಯರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಕನ್ನಡ ಪ್ರಥಮ ಭಾಷೆಯ ಮಟ್ಟದ 150 ಅಂಕಗಳಿಗೆ ಪರೀಕ್ಷೆ ನಡೆಸಲಿದ್ದು, ಅದರಲ್ಲಿ ಕನಿಷ್ಠ 50 ಅಂಕಗಳೊಂದಿಗೆ ಕಡ್ಡಾಯವಾಗಿ ತೇರ್ಗಡೆ ಹೊಂದಲೇಬೇಕು. ನಿಗದಿಪಡಿಸಿದ ಕನಿಷ್ಠ 50 ಅಂಕಗಳನ್ನು ಪಡೆಯದ ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗುವುದಿಲ್ಲ. ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ, ಪರಂತು ಎಸ್.ಎಸ್.ಎಲ್.ಸಿ ಅಥವಾ ಅದಕ್ಕೆ ತತ್ಸಮಾನವೆಂದು ಘೋಷಿಸಲ್ಪಟ್ಟ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ.ಗಿಂತ ಮೇಲ್ಮಟ್ಟದ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆ/ದ್ವಿತೀಯ ಭಾಷೆ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ ಮೇಲಿನ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿದ್ದರೆ, ಅಥವಾ ಕರ್ನಾಟಕ ನಾಗರೀಕ ಸೇವೆಗಳ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರ ಮತ್ತು ತಿದ್ದುಪಡಿಗಳನ್ವಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗಾಗಿ ನಡೆಸಿದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ, ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಬಗ್ಗೆ ವಿನಾಯಿತಿ ನೀಡಲಾಗುವುದು.

ಹಾಗೂ

ಸರ್ಕಾರದ ಪತ್ರ ದಿನಾಂಕ: 17.04.2018 ರಲ್ಲಿ 2006ರ ನಿಯಮಗಳಿಗೆ ಅಂತಿಮವಾಗಿ ಅಧಿಸೂಚನೆ ಸಂಖ್ಯೆ: ಸಿಆಸುಇ 112 ಸೇವನೆ 2013, ದಿನಾಂಕ: 31.12.2015ರ ತಿದ್ದುಪಡಿಯನ್ವಯ ಅಭ್ಯರ್ಥಿಗಳು ಒಂದು ಬಾರಿ ಆಯೋಗವು ನಡೆಸುವ ಕಡ್ಡಾಯ ಕನ್ನಡ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ ಮತ್ತೊಮ್ಮೆ ಇತರೆ ಹುದ್ದೆಗಳಿಗಾಗಿ ಆಯೋಗವು ನಡೆಸುವ ಕಡ್ಡಾಯ ಕನ್ನಡ ಪರೀಕ್ಷೆಯನ್ನು ತೆಗೆದುಕೊಳ್ಳುವುದರಿಂದ ವಿನಾಯಿತಿಯನ್ನು ನೀಡಲಾಗಿದೆ.

- ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಸಾಮಾನ್ಯ ಕನ್ನಡ/ಸಾಮಾನ್ಯ ಇಂಗ್ಲೀಷ್ ಮತ್ತು ಸಾಮಾನ್ಯ ಜ್ಞಾನ ಪತ್ರಿಕೆಗಳನ್ನು ಮಾತ್ರ ಮೌಲ್ಯಮಾಪನ ಮಾಡಲಾಗುವುದು.ಕನ್ನಡ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಗಳಿಸದ ಅಭ್ಯರ್ಥಿಗಳ ಸಾಮಾನ್ಯ ಕನ್ನಡ/ಸಾಮಾನ್ಯ ಇಂಗ್ಲೀಷ್ ಮತ್ತು ಸಾಮಾನ್ಯ ಜ್ಞಾನ ಪತ್ರಿಕೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

ವಿ.ಸೂ:–

- ಪತ್ರಿಕೆ–2ರ ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಮಾತ್ರ ಉತ್ತರಿಸಬೇಕಿರುವುದರಿಂದ, ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಎದುರುಗಿರುವ ಎರಡು ವೃತ್ತಗಳಲ್ಲಿ ಅಥವಾ ವಿಷಯ ಸಂಕೇತಗಳಲ್ಲಿ ತಾವು ಉತ್ತರಿಸುವ ವಿಷಯದ ಎದುರಿನ ಒಂದು ವೃತ್ತ ಮತ್ತು ಸಂಕೇತವನ್ನು ನಮೂದಿಸತಕ್ಕದ್ದು.
- ಪತ್ರಿಕೆ –3ರ ಸಾಮಾನ್ಯ ಜ್ಞಾನ ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಇರುತ್ತದೆ. ಕನ್ನಡ ಭಾಷೆಯಲ್ಲಿ ಇರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಅಭ್ಯರ್ಥಿಗಳು ಇಂಗ್ಲೀಷ್ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡುವುದು ಹಾಗೂ ಅದೇ ಅಂತಿಮವಾಗಿರುತ್ತದೆ.
- ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳ ಬಗ್ಗೆ ಯಾವುದೇ ಬಗೆಯಾ ಆಕ್ಷೇಪಣೆಗಳು ಇದ್ದಲ್ಲಿ, ಪರೀಕ್ಷಾ ದಿನವೇ ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಿ, ಸ್ವೀಕೃತಿ (**ACKNOWLEDGEMENT**) ಪಡೆಯತಕ್ಕದ್ದು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸಿದ ಯಾವುದೇ ಆಕ್ಷೇಪಣೆಗಳನ್ನು ಮಾನ್ಯ ಮಾಡುವುದಿಲ್ಲ.


**downloaded from: www.kpscvaani.com**

12. ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಬೆಂಗಳೂರು ಜಿಲ್ಲಾ ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು. ಪರೀಕ್ಷೆಗಳ ದಿನಾಂಕವನ್ನು ಮುಂದೆ ಜಾಹೀರಾತು ಪಡಿಸಲಾಗುವುದು ಹಾಗೂ ಆಯೋಗದ ವೆಬ್‌ಸೈಟ್ **http://kpsc.kar.nic.in** ನಲ್ಲಿ ಹಾಗೂ ಪತ್ರಿಕೆಗಳಲ್ಲಿ ಬಿತ್ತರಿಸಲಾಗುವುದು. ಪರೀಕ್ಷೆಗಳ ದಿನಾಂಕಗಳನ್ನು ಅಧಿಸೂಚಿಸಿದಾಗ ಪ್ರವೇಶ ಪತ್ರಗಳನ್ನು ಆಯೋಗದ ಅಂತರ್ಜಾಲದಿಂದ ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ ಹಾಗೂ ಅಧಿಸೂಚನೆಯ ಕಂಡಿಕೆ 2ರ ವಿಶೇಷ ಸೂಚನೆಯಡಿ ಉಪ ಕಂಡಿಕೆ 1 ರಲ್ಲಿ ತಿಳಿಸಿರುವ ಒಂದು ಮೂಲ ಗುರುತಿನ ಚೀಟಿಯೊಂದಿಗೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗತಕ್ಕದ್ದು.

13. ನೇಮಕಾತಿ ವಿಧಾನ:

ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ: ಕರ್ನಾಟಕ ನಾಗರೀಕ ಸೇವೆಗಳು (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978 ಮತ್ತು ಅದರ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 90 ಎಸ್‌ಸಿಆರ್ 85, ದಿನಾಂಕ: 27–02–1992ರಂತೆ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ಜೇಷ್ಠತೆ ಮತ್ತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ನಿಯಮಗಳನುಸಾರ ಇರುವ ಮೀಸಲಾತಿಯನ್ವಯ ಅಂತಿಮವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಆಯ್ಕೆ ಪಟ್ಟಿ ತಯಾರಿಸಲಾಗುವುದು.

14. ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:

ಜಾತಿ ಮೀಸಲಾತಿ ಕೋರಬಯಸುವ

- ಪ.ಜಾ/ಪ.ಪಂ ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ
- ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ

ಪ.ಜಾ/ಪ.ಪಂ/ಪ್ರ–1 ರ ಅಭ್ಯರ್ಥಿಗಳು ಪಡೆದಿರುವ/ ಪಡೆಯುವ ಪ್ರಮಾಣ ಪತ್ರಗಳು ಜೀವಿತ ಅವಧಿಯವರೆಗೂ/ ರದ್ದು ಮಾಡುವವರೆಗೂ ಸಿಂಧುತ್ವವನ್ನು ಹೊಂದಿದ್ದು, ಇಂತಹ ಪ್ರಮಾಣ ಪತ್ರಗಳನ್ನು ದಿನಾಂಕದ ಮಿತಿಯಿಲ್ಲದೆ ಪರಿಗಣಿಸಲಾಗುವುದು. (ಸರ್ಕಾರದ ಸುತ್ತೋಲೆ ಸಂಖ್ಯೆ: SWD 155 BCA 2011, ದಿನಾಂಕ: 22.02.2012)

- 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವು, ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಅಂದರೆ, ಹಿಂದುಳಿದ ವರ್ಗಗಳ ಪ್ರ–2ಎ, ಪ್ರ–2ಬಿ, ಪ್ರ–3ಎ ಮತ್ತು ಪ್ರ–3ಬಿ ವರ್ಗದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದ ದಿನಾಂಕದಿಂದ ಅರ್ಜಿಗಳನ್ನು ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದವರೆಗೆ 05 ವರ್ಷಗಳ ಅವಧಿಯಲ್ಲಿರಬೇಕು. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

15. ಅಭ್ಯರ್ಥಿಗಳು online ಅರ್ಜಿ ಸಲ್ಲಿಸುವುದರಿಂದ, ಜನ್ಮ ದಿನಾಂಕದ ಸಮರ್ಥನೆಗಾಗಿ SSLC ಅಂಕಪಟ್ಟಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ (TC), Cumulative Record/ Birth Certificate issued by the competent authority ಉದ್ಧೃತ ಭಾಗವನ್ನು ಸ್ಕ್ಯಾನ ಮಾಡಿ ಅಪ್ ಲೋಡ್ ಮಾಡತಕ್ಕದ್ದು;

15.1 ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯಂತೆ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು. ಈ ದಾಖಲೆಗಳನ್ನು ಹೊರತುಪಡಿಸಿ ಉಳಿದ ಯಾವುದೇ ದಾಖಲೆಗಳನ್ನು ಅಪ್‌ಲೋಡ್ ಮಾಡುವಂತಿಲ್ಲ.

15.2 ಈ ಕೆಳಕಂಡ ಪ್ರಮಾಣ ಪತ್ರಗಳನ್ನು/ದಾಖಲಾತಿಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಂದರೆ, ದಿನಾಂಕ: 05.04.2019ರ ಒಳಗೆ ಪಡೆದಿರಬೇಕು ಹಾಗೂ ಸಿಂಧುವಾಗಿರಬೇಕು, ಹಾಗೂ ಆಯೋಗವು ಪರಿಶೀಲನೆಗಾಗಿ ಹಾಜರುಪಡಿಸಲು ಸೂಚಿಸಿದಾಗ ಅರ್ಜಿಯಲ್ಲಿ ನಮೂದಿಸಿರುವ ಮೀಸಲಾತಿಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುವುದು.

1) ಕಡ್ಡಾಯವಾಗಿ ಹಾಜರು ಪಡಿಸಬೇಕಾದ ವಿದ್ಯಾರ್ಹತೆ/ಜನ್ಮ ದಿನಾಂಕ ಪ್ರಮಾಣ ಪತ್ರಗಳನ್ನು ಹಾಜರು ಪಡಿಸದಿದ್ದಲ್ಲಿ: ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.


downloaded from: www.kpscvaani.com

2) ವಿವಿಧ ಮೀಸಲಾತಿ ಕೋರಿ ಹಾಜರು ಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರು ಪಡಿಸದಿದ್ದಲ್ಲಿ: ಆ ಮೀಸಲಾತಿಯನ್ನು ರದ್ದು ಪಡಿಸಿ, ಸಾಮಾನ್ಯ ಅರ್ಹತೆಯಲ್ಲಿ ಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ, ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು, ಇಲ್ಲವಾದಲ್ಲಿ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

**15.3 ಕಡ್ಡಾಯವಾಗಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು:**

1. ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಅಧಿಸೂಚಿಸಿದಂತೆ ನಿಗದಿಪಡಿಸಲಾದ ವಿದ್ಯಾರ್ಹತೆಯಾದ **PUC** ಅಥವಾ ತತ್ಸಮಾನ ವಿದ್ಯಾರ್ಹತೆಗಳ ಪ್ರಮಾಣ ಪತ್ರಗಳು
2. ಕಲ್ಯಾಣ ಸಂಘಟಿಕರು/ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳಿಗೆ ಮೇಲೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಜೊತೆಗೆ "ಭಾರತೀಯ ಸಶಸ್ತ್ರ ಪಡೆಗಳಲ್ಲಿ ಜ್ಯೂನಿಯರ್ ಕಮಿಷನ್ಡ್ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವ ಪ್ರಮಾಣ ಪತ್ರ.
3. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ವರ್ಗಾವಣೆಯ ಪ್ರಮಾಣ ಪತ್ರ (ಟಿ.ಸಿ)/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ, **Extract of Cumulative Record / Birth Certificate issued by the competent authority**
4. ವಿವಿಧ ಮೀಸಲಾತಿಗಳನ್ನು ಕೋರಿದ್ದಲ್ಲಿ, ಮೀಸಲಾತಿ ಪ್ರಮಾಣ ಪತ್ರಗಳು.
5. ಆಧಾರ್ ಕಾರ್ಡ್.

ಮೇಲಿನ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು, ಅದೇ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು, ಅರ್ಜಿಯೊಂದಿಗೆ ಅಸ್ಪಷ್ಟವಾದ ಅಥವಾ ಸರಿಯಾಗಿ ಕಾಣದ ಪ್ರಮಾಣ ಪತ್ರಗಳನ್ನು ಅಪ್‌ಲೋಡ್ ಮಾಡಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**15.4 ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು:**

1. ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಪೂರ್ಣವಾಗಿ) ಮತ್ತು ಪಿಂಚಣಿ ಪಡೆಯುತ್ತಿರುವ ದಾಖಲೆಯ ಪ್ರತಿ, ಗುರುತಿನ ಚೀಟಿ, ಮಾಜಿ ಸೈನಿಕರ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿರುವ ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ.

2. ಅಧಿಸೂಚನೆಯಲ್ಲಿ ಮಾಜಿ ಸೈನಿಕ ಮೀಸಲಾತಿಗೆ ಸಂಬಂಧಿಸಿದಂತೆ ನಮೂದಿಸಿರುವ ನಿಯಮಗಳಂತೆ ಮಾಜಿ ಸೈನಿಕ ಮೀಸಲಾತಿ ಪ್ರಮಾಣ ಪತ್ರವನ್ನು ಆಯೋಗವು ಸೂಚಿಸಿದಾಗ ಸಲ್ಲಿಸಬೇಕು.

3. ಅಭ್ಯರ್ಥಿಯು ಮಾಜಿ ಸೈನಿಕರ ಅವಲಂಬಿತನಾಗಿದ್ದರೆ ನಿಯಮಗಳಂತೆ ಅನುಬಂಧ–06 ರಲ್ಲಿನ ನಮೂನೆಯಲ್ಲಿರುವಂತೆ ಪ್ರಮಾಣ ಪತ್ರವನ್ನು ಆಯೋಗವು ಸೂಚಿಸಿದಾಗ ಸಲ್ಲಿಸಬೇಕು.

ಸೂಚನೆ: 1) ಅಪೂರ್ಣವಾಗಿರುವ, ಫೋಟೋ ಅಪ್‌ಲೋಡ್ ಮಾಡದೇ ಇರುವ ಮತ್ತು ಸಹಿ ಅಪ್‌ಲೋಡ್ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
02) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಚಿದು ಫೋಟೋ ಪ್ರತಿಯನ್ನು ಕಡ್ಡಾಯವಾಗಿ ತಮ್ಮೆಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

**16.ಮೀಸಲಾತಿ ಕೋರಿದ್ದಲ್ಲಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು:**

1. ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಪೂರ್ಣವಾಗಿ) ಮತ್ತು ಪಿಂಚಣಿ ಪಡೆಯುತ್ತಿರುವ ದಾಖಲೆಯ ಪ್ರತಿ, ಗುರುತಿನ ಚೀಟಿ, ಮಾಜಿ ಸೈನಿಕರ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿರುವ ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ.

2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರಿಂದ ಪಡೆದ ಪ್ರಮಾಣ ಪತ್ರ. (ಮೀಸಲಾತಿ ಕೋರಿದ್ದಲ್ಲಿ) (ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ, ಪ್ರವರ್ಗ–1 ಮೀಸಲಾತಿ ಪ್ರಮಾಣ ಪತ್ರಗಳನ್ನು ಅಭ್ಯರ್ಥಿಗಳ ಆದಾಯದ ಆಧಾರದಂತೆ ನೀಡದೇ ಇರುವುದರಿಂದ, ಆಯೋಗವು ಆಪೇಕ್ಷಿಸಿದಾಗ ನಿಗದಿಪಡಿಸಿದ ನಮೂನೆಯಲ್ಲಿ ಸಿಂಧುವಾಗಿರುವ ಪ್ರಮಾಣ ಪತ್ರವನ್ನು ಸಲ್ಲಿಸಬೇಕು)

3. ಮೇಲಿನ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಕಡ್ಡಾಯವಾಗಿ ಪಡೆದಿಟ್ಟುಕೊಂಡು ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು.ಅದೇ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.ಅರ್ಜಿಯೊಂದಿಗೆ ಅಸ್ಪಷ್ಟವಾದ ಅಥವಾ ಸರಿಯಾಗಿ ಕಾಣದ ಪ್ರಮಾಣ ಪತ್ರಗಳನ್ನು ಅಪ್ಲೋಡ್ ಮಾಡಿದ್ದಲ್ಲಿ ಅಚಿತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.


downloaded from: www.kpscvaani.com

ಅಭ್ಯರ್ಥಿಗಳು ತಮ್ಮ ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆಯಲು ಅರ್ಹರೆ ಎಂಬುದನ್ನು ಆಯೋಗವು ಪರಿಶೀಲಿಸಿ ಮೇಲು ನೋಟಕ್ಕೆ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶಪತ್ರಗಳನ್ನು ಆನ್‌ಲೈನ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಲು ಅನುಮತಿಸಲಾಗುವುದು. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ, ಇತ್ಯಾದಿಗಳಿಗನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬಾರಿಯಾಗಿರುತ್ತದೆ. ಇಲ್ಲದಿದ್ದಲ್ಲಿ ಅಥವಾ ತಪ್ಪು ಮಾಹಿತಿ ನೀಡಿದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಹಾಗೂ ವಯೋಮಿತಿ ಸಡಿಲಿಕೆ, ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.
2. ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾವಣೆಯಾಗಿದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರವಹಿಸತಕ್ಕದ್ದು.
ಆಯೋಗದೊಡನೆ ಸಂಪರ್ಕಿಸಲೇ ಬೇಕಾದ ಸಂದರ್ಭದಲ್ಲಿ, ತಮ್ಮ ಮನವಿಯಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಅಗತ್ಯವಾಗಿ ಒದಗಿಸತಕ್ಕದ್ದು:–

I. ಹುದ್ದೆಯ/ವಿಷಯದ ಹೆಸರು.
II. ಅಭ್ಯರ್ಥಿಯ ಪೂರ್ಣ ಹೆಸರು ಹಾಗೂ ಇ–ಮೇಲ್ ಐ.ಡಿ..
III. ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ.
IV. ಅರ್ಜಿ ಸಂಖ್ಯೆ.

17. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:–

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಟ ಜಾತಿ | SC | Scheduled Caste |
| ಪ.ಪಂ | ಪರಿಶಿಷ್ಟ ಪಂಗಡ | ST | Scheduled Tribe |
| ಪ್ರ–1 | ಪ್ರವರ್ಗ–1 | Cat – 1 | Category – I |
| 2ಎ | ಪ್ರವರ್ಗ–2ಎ | 2A | Category – 2A |
| 2ಬಿ | ಪ್ರವರ್ಗ–2ಬಿ | 2B | Category – 2B |
| 3ಎ | ಪ್ರವರ್ಗ–3ಎ | 3A | Category – 3A |
| 3ಬಿ | ಪ್ರವರ್ಗ–3ಬಿ | 3B | Category – 3B |
| ಮಾ.ಸೈ | ಮಾಜಿ ಸೈನಿಕ | Ex-MP | Ex-Military Person |
| ಆರ್.ಪಿ.ಸಿ | ಉಳಿದ ಮೂಲ ವೃಂದ | RPC | Residual Parent Cadre |

ವಿಶೇಷ ಸೂಚನೆ:– **Online** ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಕಡ್ಡಾಯವಾಗಿ ಡೌನ್ ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.

18. ಪ್ರವೇಶ ಪತ್ರ:

ಆಯೋಗವು ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಕಳುಹಿಸುವುದಿಲ್ಲ. ಅಭ್ಯರ್ಥಿಗಳು ಸ್ವತಃ ಆಯೋಗದ ವೆಬ್‌ಸೈಟಿನಿಂದ ಪ್ರವೇಶ ಪತ್ರಗಳನ್ನು **Download** ಮಾಡಿಕೊಂಡು ಪರೀಕ್ಷೆಗೆ ಹಾಜರಾಗತಕ್ಕದ್ದು. ಪ್ರವೇಶ ಪತ್ರಗಳನ್ನು **Download** ಮಾಡಿಕೊಳ್ಳುವ ಅಂಶವನ್ನು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

19. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:

| | |
|---|---|
| ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ | :080–30574957/ 30574901/30575153 |
| ಪ್ರಾಂತೀಯ ಕಛೇರಿ ಮೈಸೂರು | :0821–2545956 |
| ಪ್ರಾಂತೀಯ ಕಛೇರಿ ಬೆಳಗಾವಿ | :0831–2475345 |
| ಪ್ರಾಂತೀಯ ಕಛೇರಿ ಗುಲ್ಬರ್ಗಾ | :08472–227944 |
| ಪ್ರಾಂತೀಯ ಕಛೇರಿ ಶಿವಮೊಗ್ಗ | :08182–228099 |


downloaded from: www.kpscvaani.com

20. <u>ದುರ್ನಡತೆ</u>:– ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಹೊಂದಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂಬ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ಆಯೋಗದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಆಯೋಗವು ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

(ಆರ್.ಆರ್. ಜನ್ನು)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.


downloaded from: www.kpscvaani.com

## ಅನುಬಂಧ-1

1. ಅಭ್ಯರ್ಥಿಗಳು KPSC ಅಂತರ್ಜಾಲದ ಮುಖಾಂತರವೇ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. ಇತರೆ ಯಾವುದೇ ಮಾದರಿಯಲ್ಲಿ / ಮೂಲದ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
2. ಅಭ್ಯರ್ಥಿಗಳು ಮೊದಲು KPSC ಅಂತರ್ಜಾಲ **"http:://kpsc.kar.nic.in"** ರಲ್ಲಿ **"New User? Register Here link."** ಅನ್ನು ಒತ್ತಿ ನೋಂದಣಿ ಮಾಡಿಕೊಳ್ಳಬೇಕು.
3. ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳಲು ಹಾಗೂ **login** ರುಜುವಾತುಗಳಿಗೆ ಅನನ್ಯವಾದ (**unique**) ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಹೊಂದಿರತಕ್ಕದ್ದು.
4. **login** ರುಜುವಾತುಗಳನ್ನು ಸೃಷ್ಟಿಸಿದ ನಂತರ ಅಭ್ಯರ್ಥಿಗಳು ಈ ರುಜುವಾತುಗಳೊಂದಿಗೆ **login** ಆಗಿ **Profile Creation Link** ಅನ್ನು ಒತ್ತಿ ಅವರ ಪೂರ್ಣ ಮಾಹಿತಿಯನ್ನು ಭರ್ತಿ ಮಾಡಬೇಕು. ಈ **Profile** ಅನ್ನು ಅಭ್ಯರ್ಥಿಗಳು ಒಂದು ಬಾರಿ ಭರ್ತಿ ಮಾಡಿದಲ್ಲಿ ಆಯೋಗದ ಮುಂದಿನ ಎಲ್ಲಾ ಅಧಿಸೂಚನೆಗಳಿಗೆ ಉಪಯೋಗವಾಗುತ್ತದೆ. ಅಭ್ಯರ್ಥಿಗಳು ಈ ಮಾಹಿತಿಯನ್ನು ಅಪ್‌ಡೇಟ್ ಮಾಡಬಹುದು.
5. ಅಭ್ಯರ್ಥಿಗಳು **Profile** ರಲ್ಲಿ ಕೋರಲಾದ ಎಲ್ಲಾ ಮಾಹಿತಿಯನ್ನು ಜಾಗರೂಕತೆಯಿಂದ ಭರ್ತಿ ಮಾಡಿ **SAVE** ಬಟನ್ ಒತ್ತಿ **SAVE** ಮಾಡಿಕೊಳ್ಳಬೇಕು.
6. ಅಭ್ಯರ್ಥಿ ತನ್ನ ಇತ್ತೀಚಿನ ಭಾವಚಿತ್ರ ಮತ್ತು ಸಹಿ ಅಪ್ಲೋಡ್ ಮಾಡಬೇಕು.
   - ಭಾವಚಿತ್ರದ ಅಳತೆ (ಪಾಸ್ ಪೋರ್ಟ್ ಅಳತೆ) (ಗರಿಷ್ಠ ಅಳತೆ: **50 KB**)
   - ಸಹಿಯ ಅಳತೆ (ಗರಿಷ್ಠ ಅಳತೆ: **50 KB**)
7. ರುಜುವಾತುಗಳೊಂದಿಗೆ **login** ಆದ ನಂತರ ಅಭ್ಯರ್ಥಿಯು ಚಾಲ್ತಿಯಲ್ಲಿರುವ ಅಧಿಸೂಚನೆಗಳನ್ನು **Online Application Link** ರಲ್ಲಿ ನೋಡಬಹುದು. **Login.** ಆದ ನಂತರ ಚಾಲ್ತಿಯಲ್ಲಿರುವ ಅಧಿಸೂಚನೆಗಳ ಪಕ್ಕದಲ್ಲಿ **Click Here to apply link** ಲಭ್ಯವಿದೆ.
8. ಅಭ್ಯರ್ಥಿಯು ಅಧಿಸೂಚನೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಲು **Click Here to apply link** ಅನ್ನು ಒತ್ತಬೇಕು.
9. **Click Here to apply link** ಅನ್ನು ಒತ್ತಿದಲ್ಲಿ ಅಧಿಸೂಚನೆಯಲ್ಲಿನ ಹುದ್ದೆಗಳಿಗೆ ಅಭ್ಯರ್ಥಿಯ ಅರ್ಹತೆಯನ್ನು ಉಪಕರಣವು ಪರಿಶೀಲಿಸುತ್ತದೆ. ಅಭ್ಯರ್ಥಿ ಅರ್ಹತಾ ಷರತ್ತುಗಳನ್ನು ಪೂರೈಸದಿದ್ದಲ್ಲಿ ಸೂಕ್ತ ಸಂದೇಶವನ್ನು ಸಿಸ್ಟಮ್ ಪ್ರಕಟಿಸುತ್ತದೆ.
10. ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಯ ಅರ್ಜಿಯನ್ನು ಮಾತ್ರ ಸಿಸ್ಟಮ್ಮಿನಿಂದ ಸ್ವೀಕರಿಸಲ್ಪಡುತ್ತದೆ.
11. ಅರ್ಜಿಯನ್ನು ಅಂತಿಮವಾಗಿ ಸಲ್ಲಿಸಿದ ನಂತರ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶ ಇಲ್ಲದ ಪ್ರಯುಕ್ತ ಅಭ್ಯರ್ಥಿಗಳು ಅಂತಿಮವಾಗಿ ಅರ್ಜಿಯನ್ನು ಸಲ್ಲಿಸುವ ಮುನ್ನ ಎಲ್ಲ ಅಗತ್ಯ ವಿವರಗಳನ್ನು ಭರ್ತಿ ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು.
12. ನಿಗದಿತ ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
13. ಪರೀಕ್ಷಾ ಶುಲ್ಕವನ್ನು ಈ ಕೆಳಕಂಡ ಮಾದರಿಯಲ್ಲಿ ಪಾವತಿಸಬಹುದು.
   - ನೆಟ್ ಬ್ಯಾಂಕಿಂಗ್.
   - ಡೆಬಿಟ್ ಕಾರ್ಡ್
   - ಕ್ರೆಡಿಟ್ ಕಾರ್ಡ್.
   - ಸಿ.ಎಸ್.ಸಿ (ನಾಗರೀಕ ಸೇವಾ ಕೇಂದ್ರ)
14. ಶುಲ್ಕ ಪಾವತಿಸಲು ಅಭ್ಯರ್ಥಿಗಳು ಈ ಕೆಳಕಂಡ ಪದ್ಧತಿಯನ್ನು ಪಾಲಿಸಬೇಕು:-
   - **Login** ಆದ ನಂತರ ಎಡ ಭಾಗದಲ್ಲಿ **My Account link** ಲಭ್ಯವಿದ್ದು, **My Account link** ಅನ್ನು ಒತ್ತಬೇಕು.
   - ಅಭ್ಯರ್ಥಿಯು ವಿವಿಧ ಅಧಿಸೂಚನೆಗಳಿಗೆ ಸಲ್ಲಿಸಿದ ಅರ್ಜಿಗಳ ಹಾಗೂ ಶುಲ್ಕ ಪಾವತಿಸಿದ ವಿವರವನ್ನು ನೋಡಬಹುದು. ಶುಲ್ಕ ವಿವರಗಳಲ್ಲಿ **Unpaid** ಎಂದು ನಮೂದಿಸಿರುವ ಅರ್ಜಿಗಳ ಎದುರು **Pay Now link** ಲಭ್ಯವಿರುತ್ತದೆ.
   - **Pay Now link** ಅನ್ನು ಒತ್ತಿದಲ್ಲಿ ಮೂರು ಆಯ್ಕೆಗಳು ಲಭ್ಯವಾಗುತ್ತದೆ: (ಎ) ನೆಟ್ ಬ್ಯಾಂಕಿಂಗ್ (ಬಿ) ಡೆಬಿಟ್ ಕಾರ್ಡ್ (ಸಿ) ಕ್ರೆಡಿಟ್ ಕಾರ್ಡ್
   - ಆನ್‌ಲೈನ್ ಪಾವತಿಯ ಮಾದರಿಯಲ್ಲಿ ಅಭ್ಯರ್ಥಿಯು ನೆಟ್ ಬ್ಯಾಂಕಿಂಗ್, ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ಮುಖಾಂತರ ಶುಲ್ಕ ಪಾವತಿಸಬಹುದು.

downloaded from: www.kpscvaani.com

**1. ಅರ್ಜಿ ಸಲ್ಲಿಸುವ ಹಂತಗಳು/ಅರ್ಜಿ ಸಲ್ಲಿಸುವ ಪ್ರಕ್ರಿಯೆ.**

ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಮೂರು ಹಂತಗಳು ಇದೆ.

1. ಮೊದಲನೇ ಹಂತ: **Profile Creation/ Updation**
2. ಎರಡನೇ ಹಂತ: **Application Submission**
3. ಮೂರನೇ ಹಂತ: **Fees Payment through My Application section**

**1.1 ವಿವರವಾದ ಹಂತಗಳು:–**

* **Marks are mandatory**/ ಗುರುತು ಇರುವ ಅಂಕಣಗಳು ಕಡ್ಡಾಯವಾಗಿ ಭರ್ತಿ ಮಾಡಬೇಕು.

**If no response found on Save/Add button kindly refresh page (press control + F5)}**

- ಹೊಸದಾಗಿ **Application Link** ರಲ್ಲಿ **log in** ಆಗಲು **user name** ಮತ್ತು **password** ಅನ್ನು ಸೃಷ್ಟಿಸಬೇಕು.
- **Application Link** ರಲ್ಲಿ **log in** ಆದ ನಂತರ ನಿಮ್ಮ ಪೂರ್ಣ **profile** ಅನ್ನು ಭರ್ತಿ ಮಾಡಿ, ಅಪ್ಲೋಡ್ ಮಾಡಬೇಕಾದ ಭಾವಚಿತ್ರ, ಸಹಿ ಸ್ಕ್ಯಾನ ಪ್ರತಿಗಳನ್ನು **jpg** ನಮೂನೆಯಲ್ಲಿ ಸಿದ್ಧವಾಗಿರಬೇಕು ಹಾಗೂ **50 kb** ಗಿಂತ ಹೆಚ್ಚಾಗಿರಬಾರದು.
- ಅಧಿಸೂಚನೆ ಎದುರು ಇರುವ **“Click here to Apply” Link** ಅನ್ನು ಒತ್ತಿ.
- ನಿಮ್ಮ **profile** ರಲ್ಲಿ ಲಭ್ಯವಿರುವ ಮಾಹಿತಿಯು ನಿಮ್ಮ ಅರ್ಜಿ ನಮೂನೆಯಲ್ಲಿ ಪ್ರಕಟವಾಗುತ್ತದೆ. ಅರ್ಜಿಯಲ್ಲಿ ಬಾಕಿ ಉಳಿದಿರುವ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸಬೇಕು.
- ಅರ್ಜಿ ಸಲ್ಲಿಸಿದ ನಂತರ **“My Application” Link** ರಲ್ಲಿ ನೀವು ಅರ್ಜಿ ಸಲ್ಲಿಸಿರುವ ಅಧಿಸೂಚನೆಯನ್ನು ಆಯ್ಕೆ ಮಾಡಿದಲ್ಲಿ ಕೆಳಗೆ ನಿಮ್ಮ ಅರ್ಜಿಯು ಪ್ರಕಟವಾಗುತ್ತದೆ.
- ಅರ್ಜಿಯ ಪಕ್ಕದಲ್ಲಿ **“Pay Now” link** ಅನ್ನು ಒತ್ತಿದಲ್ಲಿ **“Online payment”** ಆಯ್ಕೆಗಳು ಮೂಡುತ್ತದೆ.

ಒಂದು ಬಾರಿ ನೋಂದಣಿ/ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ ಸಹಾಯವಾಣಿ ಸಂಖ್ಯೆ: **(Help line) No.** 8660324265, 7349436450 ಯನ್ನು ಸಂಪರ್ಕಿಸಲು ಸೂಚಿಸಿದೆ.

**downloaded from: www.kpscvaani.com**

## ಅನುಬಂಧ–2
## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು.

### 1) ದ್ವಿತೀಯ ದರ್ಜೆ ಸಹಾಯಕರು ಹುದ್ದೆಗಳ ವರ್ಗೀಕರಣ

**ಉಳಿಕೆ ಮೂಲವೃಂದದ ಹುದ್ದೆಗಳ ಸಂಖ್ಯೆ: 13**
**ಪ್ರಾರಂಭಿಕ ಬಿಂದು:06**

| | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ. | ಕ.ಮಾ.ಅ. | ಯೋ.ಅ. | ಅಂ.ವಿ | ಒಟ್ಟು |
|---|---|---|---|---|---|---|---|---|
| ಪ.ಜಾ. | – | – | – | 01 | – | – | – | 01 |
| ಪ.ಪಂ. | – | – | – | – | – | – | – | – |
| ಪ್ರ–1 | – | – | – | – | – | – | – | – |
| ಪ್ರ–2ಎ | – | – | – | 02 | – | – | – | 02 |
| ಪ್ರ–2ಬಿ | – | – | – | 01 | – | – | – | 01 |
| ಪ್ರ–3ಎ | – | – | – | 01 | – | – | – | 01 |
| ಪ್ರ–3ಬಿ | – | – | – | 01 | – | – | – | 01 |
| ಸಾ.ಅ. | – | – | – | 07 | – | – | – | 07 |
| ಒಟ್ಟು | – | – | – | 13 | – | – | – | 13 |

### 2) ಕಲ್ಯಾಣ ಸಂಘಟಿಕರು ಹುದ್ದೆಗಳ ವರ್ಗೀಕರಣ

**ಉಳಿಕೆ ಮೂಲವೃಂದದ ಹುದ್ದೆಗಳ ಸಂಖ್ಯೆ: 08**
**ಪ್ರಾರಂಭಿಕ ಬಿಂದು:05**

| | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ. | ಕ.ಮಾ.ಅ. | ಯೋ.ಅ. | ಅಂ.ವಿ | ಒಟ್ಟು |
|---|---|---|---|---|---|---|---|---|
| ಪ.ಜಾ. | – | – | – | 01 | – | – | – | 01 |
| ಪ.ಪಂ. | – | – | – | – | – | – | – | – |
| ಪ್ರ–1 | – | – | – | 01 | – | – | – | 01 |
| ಪ್ರ–2ಎ | – | – | – | 01 | – | – | – | 01 |
| ಪ್ರ–2ಬಿ | – | – | – | 01 | – | – | – | 01 |
| ಪ್ರ–3ಎ | – | – | – | – | – | – | – | – |
| ಪ್ರ–3ಬಿ | – | – | – | – | – | – | – | – |
| ಸಾ.ಅ. | – | – | – | 04 | – | – | – | 04 |
| ಒಟ್ಟು | – | – | – | 08 | – | – | – | 08 |


downloaded from: www.kpscvaani.com

## 3) ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ವರ್ಗೀಕರಣ

**ಉಳಿಕೆ ಮೂಲವೃಂದದ ಹುದ್ದೆಗಳ ಸಂಖ್ಯೆ: 06**
**ಪ್ರಾರಂಭಿಕ ಬಿಂದು:07**

| | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ. | ಕ.ಮಾ.ಅ. | ಯೋ.ಅ. | ಅಂ.ವಿ | ಒಟ್ಟು |
|---|---|---|---|---|---|---|---|---|
| ಪ.ಜಾ. | – | – | – | 01 | – | – | – | 01 |
| ಪ.ಪಂ. | – | – | – | – | – | – | – | – |
| ಪ್ರ–1 | – | – | – | 01 | – | – | – | 01 |
| ಪ್ರ–2ಎ | – | – | – | 01 | – | – | – | 01 |
| ಪ್ರ–2ಬಿ | – | – | – | 01 | – | – | – | 01 |
| ಪ್ರ–3ಎ | – | – | – | – | – | – | – | – |
| ಪ್ರ–3ಬಿ | – | – | – | – | – | – | – | – |
| ಸಾ.ಅ. | – | – | – | 02 | – | – | – | 02 |
| ಒಟ್ಟು | – | – | – | 06 | – | – | – | 06 |

(ಆರ್.ಆರ್. ಜನ್ನು)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

downloaded from: www.kpscvaani.com

## ಅನುಬಂಧ–3
## ಪರೀಕ್ಷೆಯ ಪಠ್ಯಕ್ರಮ/ಅವಧಿ

**ದ್ವಿತೀಯ ದರ್ಜೆ ಸಹಾಯಕರು, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ನೇಮಕಾತಿಯ ಪರೀಕ್ಷೆಯು ಕೆಳಕಂಡ 3 ಪತ್ರಿಕೆಗಳನ್ನು ಹೊಂದಿರುತ್ತದೆ.**

| ಪತ್ರಿಕೆ | ವಿಷಯ | ಅಂಕಗಳು | ಪರೀಕ್ಷಾ ಅವಧಿ | ಪರೀಕ್ಷಾ ವಿಧಾನ |
|---|---|---|---|---|
| ಪತ್ರಿಕೆ 1 | ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ | 150 ಅಂಕಗಳು | 1½ ಗಂಟೆಗಳ ಅವಧಿ | ವಿವರಣಾತ್ಮಕ ಪತ್ರಿಕೆ/ Descriptive Type |
| ಪತ್ರಿಕೆ 2 | ಸಾಮಾನ್ಯ ಕನ್ನಡ/ ಸಾಮಾನ್ಯ ಇಂಗ್ಲೀಷ್ | 100 ಅಂಕಗಳು | 1½ ಗಂಟೆಗಳ ಅವಧಿ | ವಸ್ತುನಿಷ್ಠ ಬಹು ಆಯ್ಕೆ ಪತ್ರಿಕೆ/ Objective Multiple Choice Type |
| ಪತ್ರಿಕೆ 3 | ಸಾಮಾನ್ಯ ಜ್ಞಾನ | 100 ಅಂಕಗಳು | 1½ ಗಂಟೆಗಳ ಅವಧಿ | ವಸ್ತುನಿಷ್ಠ ಬಹು ಆಯ್ಕೆ ಪತ್ರಿಕೆ/ Objective Multiple Choice Type |

**ಪ್ರತಿಯೊಂದು ಪತ್ರಿಕೆಯನ್ನು 1½ ಗಂಟೆ ಸಮಯದಲ್ಲಿ ಉತ್ತರಿಸಬೇಕಾಗುತ್ತದೆ. ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಕನ್ನಡ/ಸಾಮಾನ್ಯ ಇಂಗ್ಲೀಷ್ ಈ ಎರಡು ಪತ್ರಿಕೆಗಳು "ವಸ್ತುನಿಷ್ಠ ಬಹು ಆಯ್ಕೆಯ/Objective Multiple Choice Type ವಿಧಾನದ್ದಾಗಿದ್ದು, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯು "ವಿವರಣಾತ್ಮಕ ಪತ್ರಿಕೆ/Descriptive Type ವಿಧಾನದ್ದಾಗಿರುವುದು.**


downloaded from: www.kpscvaani.com

# ಅನುಬಂಧ – 4

**ಕರ್ನಾಟಕ ಸಿವಿಲ್ ಸೇವೆಯಡಿಯ ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ–2 ಮತ್ತು ಪತ್ರಿಕೆ–3ರ ಪಠ್ಯಕ್ರಮ**

ಈ ಪರೀಕ್ಷೆಯು ಕೆಳಕಂಡ ಪತ್ರಿಕೆಗಳನ್ನು ಹೊಂದಿರುತ್ತದೆ.

| | | |
|---|---|---|
| ಪತ್ರಿಕೆ–2 : | ಸಾಮಾನ್ಯ ಕನ್ನಡ/ಸಾಮಾನ್ಯ ಇಂಗ್ಲೀಷ್ | : 100 ಅಂಕಗಳು |
| ಪತ್ರಿಕೆ–3 : | ಸಾಮಾನ್ಯ ಜ್ಞಾನ | : 100 ಅಂಕಗಳು |

ಪ್ರತಿಯೊಂದು ಪತ್ರಿಕೆಯನ್ನು 1½ ಗಂಟೆ ಸಮಯದಲ್ಲಿ ಉತ್ತರಿಸಬೇಕಾಗುತ್ತದೆ.ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಕನ್ನಡ/ಸಾಮಾನ್ಯ ಇಂಗ್ಲಿಷ್ ಈ ಎರಡು ಪತ್ರಿಕೆಗಳು "ವಸ್ತುನಿಷ್ಠ ಬಹು ಆಯ್ಕೆಯ/**Objective Multiple Choice Type"** ವಿಧಾನದ್ದಾಗಿರುವುದು.

- ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷಿನ ಪತ್ರಿಕೆಯು ಸಾಮಾನ್ಯವಾಗಿ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ವಿದ್ಯಾರ್ಥಿಗೆ ಇರಬೇಕಾದ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು. ಇದರ ಮೂಲಕ ಅಭ್ಯರ್ಥಿಯ ಕನ್ನಡ ಮತ್ತು ಇಂಗ್ಲೀಷ್ ವ್ಯಾಕರಣ ಶಬ್ಧ ಸಂಪತ್ತು, ಕಾಗುಣಿತ (**Spelling**) ಸಮನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು ಇವುಗಳ ಪರಿಜ್ಞಾನ, ಇಂಗ್ಲೀಷ್/ಕನ್ನಡ ಭಾಷೆಯನ್ನು ಅರಿಯುವ ಮತ್ತು ಗ್ರಹಿಸುವ ಅಭ್ಯರ್ಥಿಯ ಶಕ್ತಿಯ ಮತ್ತು ಅದರ ಸರಿಯಾದ ಹಾಗೂ ತಪ್ಪು ಬಳಕೆ ಇತ್ಯಾದಿಗಳನ್ನು ಪರಿಶೀಲಿಸುವ ಅಭ್ಯರ್ಥಿಯ ಸಾಮರ್ಥ್ಯ ಇವುಗಳನ್ನು ಪರೀಕ್ಷಿಸಲು ಉದ್ದೇಶಿಸಲಾಗಿದೆ.
- ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಪತ್ರಿಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡತಕ್ಕದ್ದು. ಒಮ್ಮೆ ಆಯ್ಕೆ ಮಾಡಿದ ನಂತರ ಬದಲಾವಣೆಗೆ ಅವಕಾಶ ಇರುವುದಿಲ್ಲ.
- ಸಾಮಾನ್ಯ ಜ್ಞಾನ ಪತ್ರಿಕೆಯು ಸಾಮಾನ್ಯವಾಗಿ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಇರಬೇಕಾದ ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು ಮತ್ತು ಇದು ಭಾರತದ ಸಂವಿಧಾನ, ಭಾರತದ ಇತಿಹಾಸ ಮತ್ತು ಸಂಸ್ಕೃತಿ, ಸಾಮಾನ್ಯ ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ಇತ್ತೀಚಿನ ಘಟನೆಗಳು, ದೈನಿಕ ಜೀವನದಲ್ಲಿ ವಿಜ್ಞಾನ ಮತ್ತು ಒಬ್ಬ ವಿದ್ಯಾವಂತ ವ್ಯಕ್ತಿಯು ದೈನಂದಿನ ಜೀವನದಲ್ಲಿ ಗಮನಿಸಬಹುದಾದಂತಹ ವಿಷಯಗಳು ಇವುಗಳ ಮೇಲಿನ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

**Syllabus for the competitive examination Paper-2 and Paper-3 for recruitment to the postsof Second Division Assistants in Karnataka State Civil Services**

**The examination will consist of two written papers, namely,-**
**Paper-2: General English or General Kannada**
**Paper-3: General Knowledge**

**The maximum marks for each paper will be 100. The questions in both the papers will be "Objective Multiple Choice Type". The duration for each paper will be 1½ hours.**

**The paper on General English or General Kannada will normally conform to the minimum standard expected of a student who has passed the P.U.C. Examination. It is intended to test candidate's knowledge of English/Kannada grammar, vocabulary, spelling, synonyms, antonyms, his power to understand and comprehend English/Kannada language and his ability to discriminate between correct and incorrect usage, etc.,**

**The candidates may select either the paper on General English or the paper on General Kannada.**

**The paper on General Knowledge will normally conform to the minimum standard relating to General Knowledge, expected of a student who has passed P.U.C. Examination and will cover topics relating to Constitution of India, Indian History and Culture, General and Economic Geography of India, Current Events, every day science and such matters of every day observation as may be expected of an educated person.**

**downloaded from: www.kpscvaani.com**

## ಅನುಬಂಧ – 5

## ದ್ವಿತೀಯ ದರ್ಜೆ ಸಹಾಯಕರ, ಕಲ್ಯಾಣ ಸಂಘಟಿಕರು ಹಾಗೂ ಮಿಲಿಟರಿ ಬಾಲಕರ ವಿದ್ಯಾರ್ಥಿ ನಿಲಯ ಅಧೀಕ್ಷಕರು ಹುದ್ದೆಗಳ ಪತ್ರಿಕೆ–1ರ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಪಠ್ಯಕ್ರಮ

(ಎಸ್.ಎಸ್.ಎಲ್.ಸಿ ಪರೀಕ್ಷೆಯ ಕನ್ನಡ ಪ್ರಥಮ ಭಾಷೆಯ ಮಟ್ಟದ ವಿವರಣಾತ್ಮಕ ಪತ್ರಿಕೆ)

| ಕ್ರಮ ಸಂಖ್ಯೆ | ಪಠ್ಯ ಕ್ರಮ | ಅಂಕಗಳು |
|---|---|---|
| 1 | ವಿಷಯದ ಸಮಗ್ರ ಅರ್ಥೈಸುವಿಕೆ | 25 |
| 2 | ಪದ ಪ್ರಯೋಗ | 25 |
| 3 | ವಿಷಯ ಸಂಕ್ಷೇಪಣೆ | 25 |
| 4 | ಪದ ಜ್ಞಾನ | 25 |
| 5 | ಲಘು ಪ್ರಬಂಧ | 25 |
| 6 | ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ | 25 |
| ಒಟ್ಟು | | 150 |

downloaded from: www.kpscvaani.com

**<u>ಅನುಬಂಧ-6</u>**

**(ಪ.ಜಾ./ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

# ನಮೂನೆ-ಡಿ

**(ನಿಯಮ 3ಎ (2) (3) ನೋಡಿ)**

**ಅನುಸೂಚಿತ ಅಥವಾ ಪರಿಶಿಷ್ಟ ಬುಡಕಟ್ಟುಗಳಿಗೆ (ಪ.ಜಾ & ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ**

**<u>ಪ್ರಮಾಣ ಪತ್ರ</u>**

**............................................................ ರಾಜ್ಯದ / ಕೇಂದ್ರಾಡಳಿತ ಪ್ರದೇಶದ * ................................ ಜಿಲ್ಲೆಯ / ವಿಭಾಗದ .................................................. ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ ................................. ಎಂಬುವವರ ಮಗ / ಮಗಳಾದ ಶ್ರೀ / ಶ್ರೀಮತಿ ................................ ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣಿಕರಿಸಿದೆ.**

- **ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950**
- **ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950**
- **ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950**
- **ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951**

**(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ತಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲ ತಿದ್ದುಪಡಿಯಾದಂತೆ)**

- **ಸಂವಿಧಾನ**
- **ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956**
- **ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.**
- **ಸಂವಿಧಾನ (ದಾದರ್ ಮತ್ತು ನಾಗರಹವೇಲಿ) ಅನುಸೂಚಿತ ಜಾತಿಗಳ ಆದೇಶ 1962**
- **ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964**
- **ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967**
- **ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಆದೇಶ 1988**
- **ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ**

**2. ಶ್ರೀ/ಶ್ರೀಮತಿ/ಕುಮಾರಿ * ........................................................................ ಮತ್ತು /ಅಥವಾ ಅವನ* /ಅವಳ* ಕುಟುಂಬವು ...........................................................................................ರಾಜ್ಯ/ಕೇಂದ್ರಾಡಳಿತ ಪ್ರದೇಶದ ................................................................................ ಜಿಲ್ಲಾ/ವಿಭಾಗದ .........................................ಗ್ರಾಮ/ಪಟ್ಟಣದ ಸಾಮಾನ್ಯ ನಿವಾಸಿ (ಗಳು)**

**ಸಹಿ...............................................**

**ತಹಶೀಲ್ದಾರ್..........................................**

**ಸ್ಥಳ :** | **ಪದನಾಮ**

**ದಿನಾಂಕ:** | **ಕಛೇರಿಯ ಮೊಹರಿನೊಂದಿಗೆ**

**ರಾಜ್ಯ / ಕೇಂದ್ರಾಡಳಿತ ಪ್ರದೇಶ ***

*** ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟು ಬಿಡಿ/ಹೊಡೆದು ಹಾಕಿ**

**<u>ಸೂಚನೆ:</u>** ಇಲ್ಲಿ ಉಪಯೋಗಿಸಿದ 'ಸಾಮಾನ್ಯ ನಿವಾಸಿಗಳು' ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ: ಬಿಸಿ 12028/2/76-ಎಸ್‌ಸಿಟಿ-1 ಗೃಹ ಮಂತ್ರಾಲಯ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ) ಪತ್ರ ಸಂಖ್ಯೆ: 13-2-74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ: 05.08.1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ

**downloaded from: www.kpscvaani.com**

ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

**(ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**
**ನಮೂನೆ – ಇ**
**(ನಿಯಮ 3ಎ (2) (3) ನೋಡಿ)**

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

**ಗ್ರಾಮ / ಪಟ್ಟಣದ / ನಗರ ನಿವಾಸಿಯಾದ**

**ಶ್ರೀ / ಶ್ರೀಮತಿ ಇವರ ಮಗ / ಮಗಳು / ಪತ್ನಿ /**

**ಪತಿಯಾದ ಶ್ರೀ / ಶ್ರೀಮತಿ ಇವರು ಹಿಂದುಳಿದ ವರ್ಗಗಳ (ಪ್ರವರ್ಗ)**

**ಜಾತಿಯ ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.**

**ಸ್ಥಳ :** **ತಹಶೀಲ್ದಾರ್**

**ದಿನಾಂಕ :** **ತಾಲ್ಲೂಕು**

**ಕಛೇರಿಯ ಮೊಹರು**


downloaded from: www.kpscvaani.com

**(ಪ್ರವರ್ಗ – 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

**ನಮೂನೆ – ಎಫ್**

**(ನಿಯಮ 3ಎ (2) (3)ನ್ನು ನೋಡಿ)**

**ಹಿಂದುಳಿದ ವರ್ಗಗಳಿಗೆ (2ಎ, 2ಬಿ. 3ಎ, 3ಬಿ) ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ**

ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ ಇವರ ಮಗ/ ಮಗಳು / ಪತಿ / ಪತ್ನಿಯಾದ ಶ್ರೀ / ಶ್ರೀಮತಿ / ಕುಮಾರಿ ಇವರು ಮತ್ತು ಆತನ / ಅವಳ ತಂದೆ / ತಾಯಿ / ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಮಕ: 30.03.2002 ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು;

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1 ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು;

**ಅಥವಾ**

ಸಾರ್ವಜನಿಕ ವಲಯ ಉದ್ಯಮಯಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ;

**ಅಥವಾ**

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000–12000/– ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು;

**ಅಥವಾ**

ಆತನ / ಅಕೆಯ ತಂದೆ ತಾಯಿ/ ಪೋಷಕರು / ಪತ್ನಿ / ಪತಿಯ ಆದಾಯವು ಎರಡು ಲಕ್ಷಮೀರುವುದಿಲ್ಲವೆಂದು;

**ಅಥವಾ**

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯ ತಂದೆ ತಾಯಿ / ಪೋಷಕರು / ಪತ್ನಿ / ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತ'ನ / ಆಕೆಯ ತಂದೆ ತಾಯಿ / ಪೋಷಕ / ಪತ್ನಿ / ಪತಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002ರ ಅನ್ವಯ ಶ್ರೀ/ಶ್ರೀಮತಿ/ಕುಮಾರಿ ಇವರು ಜಾತಿಗೆ ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ (2ಎ, 2ಬಿ, 3ಎ, 3ಬಿ)ಕ್ಕೆ ಸೇರಿರುತ್ತಾರೆ.

**ಸ್ಥಳ:** **ತಹಶೀಲ್ದಾರ್**

**ದಿನಾಂಕ:** ____________**ತಾಲ್ಲೂಕು**

**ಕಛೇರಿಯ ಮೊಹರು**

**ಸೂಚನೆ: 1) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 304 ಬಿಸಿಎ 2017, ದಿನಾಂಕ: 14–09–2018ರಂತೆ ಹಿಂದುಳಿದ ವರ್ಗಗಳ ಪ್ರವರ್ಗ– 2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗಳಿಗೆ ಅನ್ವಯಿಸುವಂತೆ ಕೆನೆಪದರಕ್ಕೆ ನಿಗದಿಪಡಿಸಿರುವ ಅಭ್ಯರ್ಥಿಯ ಮತ್ತು ಅವರ ತಂದೆ–ತಾಯಿ, ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು (Gross Annual Income) ರೂ. 6.00 ಲಕ್ಷಗಳಿಂದ ರೂ. 8.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಆದುದರಿಂದ, ಮೀಸಲಾತಿ ಪ್ರಮಾಣಪತ್ರವನ್ನು ನೀಡುವ ಅಧಿಕೃತ ಅಧಿಕಾರಿಯು ದಿನಾಂಕ: 14–09–2018ರ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ನೀಡತಕ್ಕದ್ದು.**

**2) ಈ ಮೇಲೆ ಹೇಳಲಾದ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಸದರಿ ಮೀಸಲಾತಿಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಅದರಂತೆ ಜಾತಿ/ ಮೀಸಲಾತಿ ಪ್ರಮಾಣ ಪತ್ರಗಳನ್ನು ಮಾಡಿಸಲು ಸೂಚಿಸಿದೆ.**

downloaded from: www.kpscvaani.com

**GOVERNMENT OF KARNATAKA**
**DEPARTMENT OF SAINIK WELFARE AND RESETTLEMENT**
**Office of the Deputy Director**
**Department of Sainik Welfare & Resettlement (Karnataka)**

**No.** **Date:**

## CERTIFICATE

**This is to certify that Shri/Smt/Kum....................................................is an applicant for ...............................in Karnataka is the spouse/son/daughter of No......................Rank........... Name ....................................................... who died/was permanently disabled while in service according to the certificate issued by Defense Authority. He died/was permanently disabled on ....................**

**Home address of the individual at the time of joining Defense Service as per the records is:**
**....................................................................**
**........................................................................**

**Place:**
**Date:**
**Resettlement**
**District .....................................**

**Signature of the Deputy Director**
**Department of Sainik Welfare & Resettlement**

**ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರು ಸಲ್ಲಿಸಬೇಕಾದ ನಿರಾಕ್ಷೇಪಣ ಪ್ರಮಾಣ ಪತ್ರ**

ಶ್ರೀ/ಶ್ರೀಮತಿ.......................................ಆದ ಇವರು ರಾಜ್ಯ/ಕೇಂದ್ರ ಸರ್ಕಾರದಲ್ಲಿ .................................... (ಪದನಾಮ) ..............................................ಇಲಾಖೆಯಲ್ಲಿ ಖಾಯಂ/ತಾತ್ಕಾಲಿಕ ಹುದ್ದೆಯನ್ನು ದಿನಾಂಕ:................... ರಿಂದ ...............................ರವರೆಗೆ ಹೊಂದಿರುವರು. ಇವರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿರುವ ಹುದ್ದೆಗಳ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿದೆ.

**ನೇಮಕಾತಿ ಪ್ರಾಧಿಕಾರಿಯ ಸಹಿ ಮತ್ತು ಮೊಹರು.**

ದಿನಾಂಕ:

ಸ್ಥಳ:

**downloaded from: www.kpscvaani.com**

downloaded from: www.kpscvaani.com

downloaded from: www.kpscvaani.com